ರಾಜ್ಯದಲ್ಲಿ ಅಂತರ್ದೇಶೀಯ ನೀರಿನಲ್ಲಿ ಮೀನುಗಾರಿಕೆ ಅಭಿವೃದ್ಧಿ

೨೧೧೪(೨೬೮೮)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು: ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂತರ್ದೇಶೀಯ ನೀರಿನಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಆ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಒಳಗಡೆ ಮೀನು ಸಾಕಾಣಿಕೆಯಿಂದ ಬಂದ ಆದಾಯ ಎಷ್ಟು(ಜಿಲ್ಲಾವಾರು ಹಾಗೂ ಮೈಸೂರು ಜಿಲ್ಲೆಯಲ್ಲಿ ತಾಲ್ಲೂಕುವಾರು ವಿವರ ಕೊಡುವುದು)

ಇ) ಮೀನುಗಾರಿಕೆಯಿಂದ ಆದಾಯ ಹೆಚ್ಚಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ) ಮೀನುಗಾರರ ಅಭಿವೃದ್ಧಿಗೆ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳು ಯಾವುವು?

ಉ) ಕಳೆದ ಒಂದು ವರ್ಷದಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಅಂತರ್ದೇಶೀಯ ಜಲ ಪ್ರದೇಶ ರಾಜ್ಯ ಅಥವಾ ದೇಶದ ವ್ಯಾಪ್ತಿಗೆ ಒಳಪಡುವುದಿಲ್ಲ. ಆದ್ದರಿಂದ ಅಂತಹ ಪ್ರದೇಶದಲ್ಲಿ ಮೀನುಗಾರಿಕೆ ಅಭಿವೃದ್ಧಿ ಸಾಧ್ಯವಿಲ್ಲ.

ಆ) ವಿವರಗಳನ್ನು ಅನುಬಂಧ-೧ರಲ್ಲಿ ನೀಡಲಾಗಿದೆ.

ಇ) ಮೀನುಗಾರಿಕೆಯಿಂದ ಆದಾಯ ಹೆಚ್ಚಿಸುವ ಸಲುವಾಗಿ ಇಲಾಖೆಯಲ್ಲಿರುವ ದೊಡ್ಡಕೆರೆಗಳು, ಸಣ್ಣಕೆರೆಗಳು ಮತ್ತು ಜಲಾಶಯಗಳು ಇವುಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಿಸಿ ಹೊಸ ನೀತಿ ಅಳವಡಿಸಲು ಯೋಜಿಸಲಾಗಿದೆ. ಗುತ್ತಿಗೆ ಮತ್ತು ಟೆಂಡರ್ ಕಂ ಹರಾಜು ಮೂಲಕ ಪಡೆದ ಕೆರೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೀನುಮರಿಗಳನ್ನು ಬಿತ್ತನೆ ಮಾಡಲು ಪ್ರೋತ್ಸಾಹಿಸಿ ಮೀನು ಮರಿಗಳ

ಮಾರಾಟದಿಂದ ಹೆಚ್ಚಿನ ಆದಾಯ ಸಂಗ್ರಹಿಸಲಾಗುವುದು. ಮಿನುಗಾರಿಕೆ ಬಂದರುಗಳಲ್ಲಿ ಶುಲ್ಕ ಸಂಗ್ರಹದ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ) ಮಿನುಗಾರರ ಅಭಿವೃದ್ಧಿಗೆ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

ಕೇಂದ್ರ ಪುರಸ್ಕೃತ ಮಿನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆ, ಮಿನುಗಾರರ ಮಾದರಿ ಗ್ರಾಮಗಳ ಅಭಿವೃದ್ಧಿ, ಕರಾವಳಿ ಮಿನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ, ನಿರ್ವಸತಿ ಮಿನುಗಾರರಿಗೆ 'ಮತ್ಸ್ಯ ಆಶ್ರಯ ಯೋಜನೆ'ಯಡಿ ಹುಡ್ಕೋ ನೆರವಿನ ಮನೆ ನಿರ್ಮಾಣ ಯೋಜನೆ, ಸಾಂಪ್ರದಾಯಿಕ ಮಿನುಗಾರಿಕೆ ದೋಣಿಗಳ ಯಾಂತ್ರೀಕರಣಕ್ಕೆ ಸಹಾಯ, ಯಾಂತ್ರೀಕೃತ ಮಿನುಗಾರಿಕೆ ದೋಣಿಗಳು ಉಪಯೋಗಿಸುವ ಡೀಸಲ್ ಮೇಲಿನ ಕೇಂದ್ರ ಅಬ್ಕಾರಿ ಶುಲ್ಕ ರಿಯಾಯಿತಿ, ದೂರ ತೀರದ ಮಿನುಗಾರಿಕೆ ದೋಣಿಗಳಿಗೆ ಫಿಶ್ ಫೈಂಡರ್ಸ್ ರೇಡಿಯೋ ಟೆಲಿಫೋನ ಜಿ.ಪಿ.ಎಸ್. ನಾವಿಗೇರಟ್ಸ್ ಮುಂತಾದ ವಿದ್ಯುತ್‌ಮಾನ ಉಪಕರಣಗಳನ್ನು ಖರೀದಿಸಲು ನೆರವು, ಶಹರಿ ರೋಜಗಾರ್ ಯೋಜನೆಯಡಿ ನಿರುದ್ಯೋಗ ಯುವಕರಿಗೆ ಮಿನಿನ ಖಾದ್ಯಗಳನ್ನು ಮಾರಾಟ ಮಾಡಲು ನೆರವು, ಮಹಿಳಾ ಮಿನುಗಾರರಿಗೆ ಸಹಕಾರ ಸಂಘದ ಸದಸ್ಯತ್ವ ಪಡೆಯಲು ನೆರವು, ಖಾಸಗಿ ಕ್ಷೇತ್ರದಲ್ಲಿ ಮಿನು ಮರಿ ಉತ್ಪಾದನೆಗೆ ನೆರವು, ಜೌಗು:ಜೌಳು ಪ್ರದೇಶದಲ್ಲಿ ಮಿನು ಕೊಳ ನಿರ್ಮಾಣಕ್ಕೆ ಸಹಾಯ, ಸ್ವಂತ ಜಮೀನಿನಲ್ಲಿ ಮಿನು ಕೊಳ ನಿರ್ಮಾಣಕ್ಕೆ ಸಹಾಯ ಮತ್ತು ಸಿಹಿ ನೀರು ಸೀಗಡಿ ಕೃಷಿಗೆ ಪ್ರೋತ್ಸಾಹ.

ಉ) ಕಳೆದ ಒಂದು ವರ್ಷದಲ್ಲಿ ಮಾಡಲಾದ ವೆಚ್ಚವನ್ನು ಅನುಬಂಧ-IIರಲ್ಲಿ ನೀಡಲಾಗಿದೆ.

ಅನುಬಂಧ-೧

ಕಳೆದ ಎರಡು ವರ್ಷಗಳಲ್ಲಿ ಮಾನು ಸಾಕಾಣಿಕೆಯಿಂದ ಬಂದ ಜಿಲ್ಲಾವಾರು ಆದಾಯ ಕೆಳಗೆ ನೀಡಲಾಗಿದೆ. ಮೈಸೂರು ಜಿಲ್ಲೆಯಲ್ಲಿನ ತಾಲ್ಲೂಕುವಾರು ವಿವರಗಳನ್ನೂ ಸಹ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆ	೧೯೯೮-೯೯ ಆದಾಯ	೧೯೯೯-೨೦೦೦ ಆದಾಯ (ಡಿಸೆಂಬರ್ ೯೯ ರವರೆಗೆ)
೧	೨	೩	೪
೧.	ಬೆಂಗಳೂರು (ನಗರ)	೧೦,೫೭,೦೬೦	೧೫,೬೨,೨೦೯
೨.	ಬೆಂಗಳೂರು (ಗ್ರಾ)	೧೫,೭೦,೩೩೫	೧೪,೬೧,೨೪೦
೩.	ಬಳ್ಳಾರಿ	೧,೫೩,೪೯೦	೧,೯೯,೧೫೩
೪.	ಕೋಲಾರ	೧೭,೪೪,೯೫೧	೭,೩೪,೨೩೭
೫.	ತುಮಕೂರು	೩೫,೩೩,೪೧೬	೨೭,೪೪,೫೪೧
೬.	ಶಿವಮೊಗ್ಗ	೬,೫೩೪,೫೪೦	೪೧,೫೪,೧೭೪
೭.	ಚಿಕ್ಕಮಗಳೂರು	೪,೪೪,೦೪೪	೪,೪೨,೯೭೬
೪.	ಚಿತ್ರದುರ್ಗ	೫,೯೪,೦೪೧	೧೨,೪೯,೭೨೨
೯.	ಮೈಸೂರು	೧೩,೫೬,೭೯೨	೧೪,೨೦,೨೦೪
			(೩:೨೦೦೦)
೧೦.	ಮಂಡ್ಯ	೨೭,೯೧,೦೭೫	೧೪,೯೨,೪೪೪
೧೧.	ಹಾಸನ	೧೦,೭೧,೧೨೭	೧೪,೨೪,೪೧೦
೧೨.	ಮಡಿಕೇರಿ(ಕೊಡಗು)	೧,೫೦,೭೯೩	೨,೨೭೬,೨೭೪

೧೩. ದಕ್ಷಿಣ ಕನ್ನಡ	೩,೩೭,೯೮೪	೬೧,೪೭೩
೧೪. ರಾಯಚೂರು	೨,೮೪,೨೯೬	೧,೪೭,೬೨೬
೧೫. ಬೀದರ್	೪,೦೬,೭೦೧	೨,೪೩,೫೨೧
೧೬. ಗುಲಬರ್ಗಾ	೧೦,೩೩,೫೧೩	೯,೨೨,೬೦೧
೧೭. ಧಾರವಾಡ	೧,೦೮,೦೧೪	೧,೯೭,೬೫೧
೧೮. ಬೆಳಗಾಂ	೮,೪೨,೨೫೧	೫,೮೮,೪೯೨
೧೯. ಬಿಜಾಪುರ	೧೦,೫೧,೬೩೯	೯,೧೫,೨೯೭
೨೦. ಉತ್ತರ ಕನ್ನಡ	೧೧,೧೩,೫೦೮	೯,೧೧,೯೪೨
೨೧. ದಾವಣಗೆರೆ	೧೦,೦೦,೪೩೦	೧೫,೯೧,೬೨೫
೨೨. ಹಾವೇರಿ	೫,೧೯,೮೯೬	೬,೨೪,೬೨೭
೨೩. ಗದಗ	೧,೧೮,೯೩೩	೧,೦೭,೨೩೫
೨೪. ಚಾಮರಾಜನಗರ	೩,೧೭,೦೪೧	೨,೮೦,೯೭೦
೨೫. ಉಡುಪಿ	೧೯,೪೦,೪೭೯	೧೮,೪೦,೫೬೪
೨೬. ಕೊಪ್ಪಳ	೫,೩೯,೯೧೮	೩,೭೨,೪೩೮
೨೭. ಬಾಗಲಕೋಟೆ	೩,೪೧,೬೬೩	೧೧,೯೪,೩೬೪
ಒಟ್ಟು	೩,೧೪,೦೭,೩೩೦	೨,೭೦,೪೭,೬೫೪

ಮೈಸೂರು ಜಿಲ್ಲೆಯಲ್ಲಿ ತಾಲ್ಲೂಕುವಾರು ಗಳಿಸಿದ ಆದಾಯ ಈ ಕೆಳಗೆ ನೀಡಲಾಗಿದೆ.

ಕ್ರ.ಸಂ.	ತಾಲ್ಲೂಕು	೧೯೯೮-೯೯	೧೯೯೯-೨೦೦೦
೧)	ಮೈಸೂರು	೩೨,೧೧೪	೫೬,೦೫೧
೨)	ನಂಜನಗೂಡು	೮೧,೨೫೫	೬೨,೦೭೭
೩)	ಟಿ.ನರಸೀಪುರ	೧,೮೭,೨೩೭	೨,೮೯,೫೪೭
೪)	ಹುಣಸೂರು	೨,೬೪,೪೧೨	೪,೩೪.೨೬೮
೫)	ಹೆಚ್.ಡಿ.ಕೋಟೆ	೩,೧೯,೫೩೬	೫,೮೯,೦೧೫
೬)	ಪಿರಿಯಾಪಟ್ಟಣ	೨,೫೭,೬೪೦	೨,೦೮,೩೦೩
೭)	ಕೆ.ಆರ್.ನಗರ	೨,೧೪,೫೯೮	೧,೮೦,೯೪೩
		೧೩,೫೬,೭೬೨	೧೮,೨೦,೨೦೪

ಅನುಬಂಧ - II

೧೯೯೯-೨೦೦೦ ವೆಚ್ಚ

(ರೂ.ಲಕ್ಷಗಳಲ್ಲಿ)

೧)	ಕೇಂದ್ರ ವಲಯ ಯೋಜನೆ ಮಾನುಗಾರರ ಸಮೂಹ ವಿಮಾ ಯೋಜನೆಯಡಿ	೭.೨೦
೨)	ಮಾನುಗಾರರ ಕಲ್ಯಾಣ ನಿಧಿ, ಮಾದರಿ ಗ್ರಾಮಗಳ ಅಭಿವೃದ್ಧಿ	೬೪.೨೭
೩)	ಸಾಂಪ್ರದಾಯಿಕ ದೋಣಿಗಳನ್ನು ಯಾಂತ್ರೀಕರಿಸುವ ಯೋಜನೆ.	೭.೯೪
೪)	ಯಾಂತ್ರೀಕೃತ ಮಾನು ದೋಣಿಗಳು ಬೆಳೆಸುವ ಹೆಚ್.ಎಸ್.ಡಿ ಮೇಲಿನ ಕೇಂದ್ರ ಅಬಕಾರಿ ತೆರಿಗೆ ಮಾಫಿ.	೧೮೬.೬೬
೫)	ದೂರ ತೀರ ಮಾನುಗಾರಿಕೆ ನೌಕೆಗಳಿಗೆ ಮಾನುಗಳನ್ನು ಕಂಡು ಹಿಡಿಯಲು ರೇಡಿಯೋ, ಟೆಲಿವಿಷನ್ ಮುಂತಾದ ಉಪಕರಣಗಳ ಖರೀದಿ.	೨.೪೮
೬)	ಶಹರಿ ರೋಜಗಾರ್ ಯೋಜನೆಯಡಿ ಬೇಯಿಸಿದ ಮಾನುಗಳ ಮಾರಾಟ	೧.೪೪
೭)	ಸಾಂಪ್ರದಾಯಿಕ ಮಾನುಗಾರರಿಗೆ ಉಳಿತಾಯ ಹಾಗೂ ಪರಿಹಾರ ಯೋಜನೆ.	೬೨.೦೦
೮)	ಮಾನುಗಾರಿಕೆ ಸಹಕಾರ ಸಂಘಗಳಿಗೆ ಸದಸ್ಯರಾಗಿ ನೊಂದಾಯಿಸಲು ಮಹಿಳಾ ಮಾನುಗಾರರಿಗೆ ಸಹಾಯ.	೧.೦೦
೯)	ಖಾಸಗಿ ಕ್ಷೇತ್ರದಲ್ಲಿ ಮಾನುಮರಿ ಉತ್ಪಾದನಾ ಕೇಂದ್ರ ನಿರ್ಮಾಣಕ್ಕೆ ಸಹಾಯ;	೧.೫೦
೧೦)	ಅಚ್ಚುಕಟ್ಟು ಪ್ರಾಧಿಕಾರಗಳ ಜೌಗು:ಜೌಳು ಪ್ರದೇಶಗಳಲ್ಲಿ ಮಾನು ಕೃಷಿ: ಕೊಳಗಳ ನಿರ್ಮಾಣ	೫.೫೦
೧೧)	ಅಲಂಕಾರಿಕ ಮಾನುಗಳ ಉತ್ಪಾದನೆ ಮತ್ತು ಮಾರಾಟ	೧,೩೦
೧೨)	ಸಿಹಿ ನೀರು ಸೀಗಡಿ ಕೃಷಿ ಉದ್ಯಮದಾರರಿಗೆ ಸಹಾಯ	೧.೪೦
	ಒಟ್ಟು	೨೬೨.೬೯